ಬದಿಗಿರುವ ಕಿಟಕಿಯೊಳಕ್ಕೆ ನೋಟ ತೂರಿ, ಆಕಾಶದಲ್ಲಿನ್ನೂ ಬೆಳಕಡರದಿರುವುದನ್ನು ಕಂಡುಕೊಂಡು, ಬೆಳಬೆಳಿಗ್ಗೆ ಜಗತ್ತಿನ್ನೂ ತನ್ನ ಮುಸುಡಿ ಕೂಡ ತೊಳೆಯಲೆದ್ದಿರದ ವೇಳೆಯಲ್ಲಿ ಯಾರಪ್ಪ ಕರೆಯುತ್ತಿರುವುದು...ಅಂತನಿಸಿದ್ದೇ, ದಡಬಡನೆ ಬಾಗಿಲು ಜೀಕಿ, ಬಾಯೊಳಗಿಕ್ಕಿದ ಬ್ರಷ್ಷು ಸಹಿತ ಫೋನಿದ್ದಲ್ಲಿಗೆ ಹೆಜ್ಜೆ ಹಾಕುವಷ್ಟರಲ್ಲಿ, ಹೆಂಡತಿ ರೇಣು ಈಗಾಗಲೇ ಅಲ್ಲಿ ತಲುಪಿರುವುದನ್ನು ನೋಡಿ, ಮರಳಿ ಬಾತ್‌ರೂಮು ಹೊಕ್ಕುಕೊಂಡ. ಆರೇಳು ತಿಂಗಳಿಗೊಂದಾವರ್ತಿಯೆಂಬಂತೆ, ಆಗಲೋ ಈಗಲೋ ಇದ್ದಕ್ಕಿದ್ದಂತೆ ಇನ್ನೂ ಬದುಕಿದ್ದೇನೆ... ಬಂದು ಮೈದಡವಿ ಸಂತೈಸು... ಅನ್ನುವ ಹಾಗೆ, ಬಡಿದುಕೊಳ್ಳುವ ಒಳಮನೆಯಲ್ಲಿರುವ ಈ ಪ್ಯಾನಸಾನಿಕ್ ಹ್ಯಾಂಡ್‌ಸೆಟ್ಟು, ಇದೀಗ ಐದೂಕಾಲು ಗಂಟೆಯ ಬೆಳ್ಳಬೆಳಗ್ಗೆ ಕೂಗತೊಡಗಿದ್ದು ರುದ್ರನೀಲ ಥಾಪಸೆಯನ್ನು ವಿಪರೀತ ಕುತೂಹಲಕ್ಕೀಡಾಗಿಸಿತ್ತಾಗಿ, ಹೊರಗೆ ಹೆಂಡತಿ ಮಾತನಾಡುವುದು ಅಷ್ಟಿಷ್ಟಾದರೂ ಕೇಳಿಸಿ, ವಿಷಯವೇನಂತ ಅರಿಯಬಹುದೆಂದುಕೊಂಡು, ಬಾತ್‌ರೂಮಿನ ಡೋರನ್ನು ಪುನಃ ಜಡಿಯದೆ ಖುಲ್ಲಾ ಬಿಟ್ಟುಕೊಂಡುಳಿದ.

'ಹೆಲೋ... ಕ್ಯಾ? ಆಪ್ ಕೋನ್? ಇತನಾ ಸುಬಹ್ ಸುಬಹ್ ಫೋನ್ ಕರ್‌ರಹೇ ಹೋ...' ರೇಣು ಕೂಗಿ ಮಾತನಾಡಿದ್ದು ಕೇಳಿಸಿತು. 'ಥೋಡಾ ಆವಾಜ್ ಊಂಚಾ ಕೀಜೀಏಗಾ.... ಕುಛ್ ಸುನಾ ನಹೀ ಹೇ....' ಎಂದು ಸುರು ಹಚ್ಚಿಕೊಂಡ ರೇಣು, 'ಯಾರು ನೀವು? ಇಷ್ಟು ಹೊತ್ತಿನಲ್ಲಿ ಫೋನ್ ಮಾಡಿದೀರಲ್ಲ...' ಎಂದು ಕನ್ನಡಕ್ಕಿಳಿದಿದ್ದೇ, ರುದ್ರನೀಲ ಥಾಮಸೆಯ ಕಿವಿಗಳು ನಿಮಿನಿಮಿರಿ ಚುರುಕುಗೊಂಡವು. 'ಹ್ಞಾಂ... ಡೇವಿಡ್ ಮನೆಯಿಂದ ಅಂತಂದರೆ?... ಯಾರು? ನೀವು ಯಾರೂಂತ ಮೊದಲು ಹೇಳಿ...'

ರುದ್ರನೀಲ ಥಾಪಸೆಗೆ ಡೇವಿಡ್ ಅಂದರೆ ಯಾರೆಂದು ಥಕ್ಕನೆ ಹೊಳೆಯಲಿಲ್ಲ. ಹಾಗಂತ, ರೇಣುವಿಗೂ ತಿಳಿಬಂದಿರಲಿಲ್ಲ. ಯಾರಿರಬಹುದು? ಈ ಹೆಸರಿರುವ ಪರಿಚಯಸ್ಥರಾರೂ ಗೊತ್ತೇ ಇಲ್ಲವೆ?

'ಡೇವಿಡ್ ಅಂತ ನಮಗೆ ಯಾರೂ ಗೊತ್ತಿಲ್ಲ... ರಾಂಗ್ ನಂಬರ್...' ರೇಣು ಫೋನಿಕ್ಕಿದ್ದು ಕೇಳಿಸಿತು. ಅಷ್ಟರಲ್ಲಿಯಾಗಲೇ, ರುದ್ರನೀಲ ಥಾಪಸೆ ಸರಬರನೆ ತವಕಿಸುತ್ತ, ಎರಡು ಸರ್ತಿ ಬಾಯೊಳಕ್ಕೆ ನೀರಿಳಿಸಿಕೊಂಡು, ಮುಕ್ಕಳಿಸಿಕೊಂಡು ನಡುಮನೆಗೆ ಹೋಗಲು ರೆಡಿಗೊಂಡಿದ್ದ. 'ಸುಬಹ್ ಸುಬಹ್ ನೀಂದ್ ಉಡಾತೇ ಹೇ, ಲೋಗ್... ಥುತ್...' ಅಂತಂದು ಫೋನು ಕುಕ್ಕಿದ ರೇಣುವಿನ ಸಿಂಡರುಮೋರೆ ಇವನಿದ್ದಲ್ಲಿಗೇ ತೋರಿಬಂತು.

★★★

ರೇಣು ಅಂತೆಂದು ಮೊಟುಕಾಗಿ ತಾನೇ ಕರೆದುಕೊಳ್ಳುವ, ರೇ... ಅಂತಂದು ಗಂಡನಿಂದ ಇನ್ನೂ ಚಿಕ್ಕದಾಗಿ ಕೂಗಿಸಿಕೊಳ್ಳುವ ಈ ರೇಣುಯುಕ್ತಿ ಥಾಪಸೆ, ವಾರದ ದಿವಸಗಳಲ್ಲಿಯೇ, ಬೆಳಿಗ್ಗೆ ಏಳುಏಳೂವರೆಗೆ ಮೊದಲು ಹಾಸಿಗೆ ಬಿಟ್ಟೇಳಲೊಲ್ಲಳು... ಹೀಗಿರುವಾಗ ಭಾನುವಾರವಂತೆಂಬ ಪ್ರಶಸ್ತ ಬಿಡುವಿನಲ್ಲಿ ಎದ್ದಾಳೆಯೆ? ದಿನವೂ ಠೀಕು ಆರೂವರೆಯ ಹೊತ್ತಿಗೆ ಅವಳ ಆಂಡ್ರಾಯ್ಡುಫೋನು, 'ಎದ್ದೇಳು ರೇಣುಕವ್ವ... ಏಳು ಬೆಳಗಾಯಿತು...' ಎಂದು ಬಲು ಕರ್ಕಶವಾಗಿ ಸುಪ್ರಭಾತದ ಅಲಾರ್ಮು ಹೇಳುತ್ತಾದರೂ, ಪದೇ ಪದೇ ಅದರ ಮೂತಿ ಮೊಟುಕಿ, ಇನ್ನೈದು ಮಿನಿಟು... ಇನ್ನೊಂದೈದು ಮಿನಿಟು... ಅಂತಂದು ಎಚ್ಚರಿಕೆಯನ್ನು ವಿಳಂಬಿಸಿ, ಅರೆಮುಕ್ಕಾಲು ತಾಸು ನಿಗದಿಗೂ ಹೆಚ್ಚು ಪವಡಿಸುವಳು. ಈ ಪರಿಯ ಅನುದಿನದ ವಿರಾಮವಿಸ್ತರಣೆಗೆ ಅವಳ ಹಾಸಿಗೆಯೂ ಒಗ್ಗಿಹೋಗಿರುವುದಾಗಿ, ಅದರ ಮೇಲುಹೊದಿಕೆಯ